**ಮೈಸೂರು ವಿಶ್ವ ವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ ಮಹಾದೇವಸ್ವಾಮಿ ಅವರಿಗೆ ದೊರೆತಿದೆ. ಮಲೆಮಹಾದೇಶ್ವರನ ಕುರಿತು ಹಗಲಿರುಳುಗಳ ಪರಿವೆಯಿಲ್ಲದೆ ಹಾಡುವ ಕಲಾವಿದನಿಗೆ 'ಗೌರವ' ಡಾಕ್ಟರೇಟ್ ಸಂದಿರುವುದು, ನಮ್ಮ ವಿಶ್ವವಿದ್ಯಾಲಯಗಳು ಇನ್ನೂ ವಿವೇಕ ಉಳಿಸಿಕೊಂಡಿವೆ ಎನ್ನುವುದರ ಅಪರೂಪದ ಉದಾಹರಣೆಯಂತಿದೆ.**

ಮಲೆ ಮಹಾದೇಶ್ವರ ಸ್ವಾಮಿ ಪದ ಹಾಡುತ್ತಿದ್ದ ಅವರ ಬದುಕು ಭಿಕ್ಷೆ ಬೇಡುವುದಕ್ಕಷ್ಟೇ ಸೀಮಿತವಾಗಿತ್ತು. ಮಳವಳ್ಳಿ ಬಸ್ ನಿಲ್ದಾಣದಲ್ಲಿ ಹಾಡಿದಾಗ ಪುಡಿಗಾಸು ದೊರೆಯುತ್ತಿತ್ತು. ಹಳ್ಳಿಹಳ್ಳಿ ಸುತ್ತಿ ಹಾಡಿದಾಗ ಒಂದಷ್ಟು ದವಸ, ಧಾನ್ಯ ಸಿಗುತ್ತಿತ್ತು. ತಲೆತಲಾಂತರದಿಂದ ಭಿಕ್ಷೆ ಎಂಬುದು ಅವರ ಕುಟುಂಬದ ಭಾಗವಾಗಿತ್ತು. ಆದರೆ, ಮಹಾದೇವಸ್ವಾಮಿ ಎಂಬ ಹುಡುಗ 10ನೇ ತರಗತಿವರೆಗೆ ಓದಿದ್ದ ಕಾರಣ ಹಾಡುವುದರಲ್ಲೂ ಹೊಸತನ ಹುಡುಕುತ್ತಿದ್ದ. ಕೇಳಿದ್ದನ್ನು ಬರಹಕ್ಕಿಳಿಸಿ ಅಭ್ಯಾಸ ಮಾಡುತ್ತಿದ್ದ. ಮಲೆಮಹಾದೇಶ್ವರ ಸ್ವಾಮಿ ಹಾಡುಗಳ ಜೊತೆಗೆ ಸಿದ್ಧಪ್ಪಾಜಿ, ಸಂಕಮ್ಮ, ನಂಜುಂಡೇಶ್ವರ, ಬಿಳಿಗಿರಿ ರಂಗನಾಥ, ನೀಲವೇಣಿ, ಚಾಮುಂಡೇಶ್ವರಿ ಕತೆಗಳನ್ನೂ ಕಲಿತುಕೊಂಡ. 7 ರಾತ್ರಿಗಳ ಕಾಲ ಮಲೆ ಮಹಾದೇಶ್ವರನ 7 ಅಧ್ಯಾಯದ ಕತೆ, 4 ರಾತ್ರಿಗಳ ಕಾಲ ಮಂಟೆಸ್ವಾಮಿ ಕತೆ ಹೇಳುವ ಸಾಮರ್ಥ್ಯವನ್ನು ಕರಗತ ಮಾಡಿಕೊಂಡ.

ಅಕ್ಷರ ಬಲ್ಲ ಕಾರಣದಿಂದಾಗಿ ಜಾನಪದ ಜ್ಞಾನಭಂಡಾರವನ್ನು ಮಹಾದೇವಸ್ವಾಮಿ ತನ್ನ ಮಸ್ತಕಕ್ಕೆ ತೆಗೆದುಕೊಂಡ. ಅದರ ಪರಿಣಾಮದಿಂದಾಗಿ ಕನ್ನಡ ನಾಡಿನಾದ್ಯಂತ ಮನೆಮಾತಾದ, ಆತನ ಹಾಡುಗಳು ಕನ್ನಡಿಗರ ನಾಲಗೆಯ ಮೇಲೆ ನಲಿದಾಡುವಂತಾದವು. ಕ್ಯಾಸೆಟ್ ಲೋಕದಲ್ಲಿ ಇತಿಹಾಸವನ್ನೇ ಬರೆದ, ಲಕ್ಷ ಜನಪದ ಗೀತೆಗಳ ಸರದಾರನಾದ. ಅದೇ ಹುಡುಗ ಇಂದಿನ ಪ್ರಖ್ಯಾತ ಜನಪದ ಗಾಯಕ ಮಳವಳ್ಳಿ ಎಂ. ಮಹಾದೇವಸ್ವಾಮಿ. ಸದ್ಯ ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆಯುತ್ತಿರುವ ಅವರು ಜಾನಪದ ಕ್ಷೇತ್ರದ ಅನುಪಮ ನಿಧಿ.

ಮಹಾದೇವಸ್ವಾಮಿ ಅವರ ಸಾಧನೆಯ ಹಿಂದೆ ಗುರುವೊಬ್ಬರ ಮಾರ್ಗದರ್ಶನವಿದೆ. ಬಸ್‌ಗಳಲ್ಲಿ ಹಾಡಿ ಭಿಕ್ಷೆ ಬೇಡುವುದು, ಊರೂರು ಸುತ್ತುವುದನ್ನು ಗಮನಿಸಿದ ಗಾಯಕ ಉಳ್ಳಂಬಳ್ಳಿ ಮಹಾದೇವಪ್ಪ ಅವರು ಒಂದು ಸಲಹೆ ಕೊಟ್ಟರು: 'ಊರೂರು ಸುತ್ತಿದರೆ ಅಲೆಮಾರಿಯಾಗುತ್ತೀರಿ. ಭಿಕ್ಷೆಯನ್ನೇ ಬೇಡಿ, ಆದರೆ ಕೂತು ಹಾಡುವುದನ್ನು ಕಲಿತುಕೊಳ್ಳಿ'. ಅವರ ಮಾತಿನಿಂದಾಗಿ ಊರು ಸುತ್ತುವುದನ್ನು ಬಿಟ್ಟ ಮಹಾದೇವಸ್ವಾಮಿ ಕೂತು ಹಾಡುವುದನ್ನು ರೂಢಿಸಿಕೊಂಡರು. ಉಳ್ಳಂಬಳ್ಳಿ ಮಹಾದೇವಪ್ಪ ತಮ್ಮ ಮನಸ್ಸಿನೊಳಗಿದ್ದ ಜನಪದ ಕಥನಗಳನ್ನು, ಕಾವ್ಯಗಳನ್ನು ಬರಹಕ್ಕಿಳಿಸಿಕೊಂಡರು.

ಭಿಕ್ಷೆ ಬೇಡುವುದಕ್ಕಷ್ಟೇ ಸೀಮಿತವಾಗಿದ್ದ ಅವರ ಹಾಡುಗಳು ಕಲಾಸ್ವರೂಪ ಪಡೆದುಕೊಂಡವು, ವೇದಿಕೆಗೇರಿದವು, ರಂಗಭೂಮಿಯಲ್ಲೂ ಸ್ಥಾನಪಡೆದವು. ಆ ಹಾಡುಗಳು ಸಂಶೋಧನೆಗೂ ಮಾರ್ಗ ತೋರಿವೆ. ಹುಡುಕಾಟದ ಮನೋಭಾವ ಮಹಾದೇವಸ್ವಾಮಿ ಜನಪದ ಲೋಕದಲ್ಲಿ ತಾರೆಯಾಗಿ ಬೆಳೆದಿದ್ದಾರೆ.

ಅವರ ಅಪ್ಪಟ ಗ್ರಾಮೀಣ ಧ್ವನಿ ಸಾಣೆ ಹಿಡಿದ ಚಾಕುವಿನಷ್ಟು ಮೊನಚು. ಹೆಗಲ ಮೇಲೆ ತಂಬೂರಿ, ಬೆರಳಲ್ಲಿ ಗಗ್ರ ಹಿಡಿದು ಕೂತರೆ ಹಗಲು ರಾತ್ರಿಗಳ ವ್ಯತ್ಯಾಸ ತಿಳಿಯುವುದಿಲ್ಲ. 'ಮಹಾದೇಶ್ವರ...' ಎಂದರೆ ಸಾಕು, ಮಳವಳ್ಳಿ ಮಹಾದೇಶ್ವರಸ್ವಾಮಿ ಕಣ್ಣಮುಂದೆ ಬರುವಷ್ಟು ಕೇಳುವ ಹೃದಯಗಳನ್ನು ಅವರು ಸೂರೆಗೊಂಡಿದ್ದಾರೆ.

ಮಹಾದೇವಸ್ವಾಮಿ ಅವರು ಮಾದಯ್ಯ–ಮಂಚಮ್ಮ ಅವರ ಪುತ್ರ. ತಂದೆ ಶಹನಾಯಿ ನುಡಿಸುತ್ತಿದ್ದ ಕಲಾವಿದ, ತಾಯಿ ಸೋಬಾನೆ ಪದಗಳ ಹಾಡುಗಾರ್ತಿ. ಜನಪದ ಗೀತೆಗಳ ಜೊತೆಗೆ ರಾಜ್‌ಕುಮಾರ್ ಹಾಡುಗಳೆಂದರೆ ಬಲು ಇಷ್ಟ. ಬಸ್ ನಿಲ್ದಾಣದಲ್ಲಿ ಭಿಕ್ಷೆ ಬೇಡುವಾಗ ಜನರು ರಾಜ್‌ಕುಮಾರ್ ಹಾಡು ಹೇಳುವಂತೆ ಒತ್ತಾಯಿಸುತ್ತಿದ್ದರು. ಊಟಕ್ಕೆ ಉಪ್ಪಿನಕಾಯಿಯಂತೆ ಜನಪದ ಗೀತೆಗಳ ಜೊತೆಗೆ ರಾಜ್ ಸಿನಿಮಾ ಗೀತೆಗಳನ್ನೂ ಹಾಡಿ ಜನರನ್ನು ರಂಜಿಸುತ್ತಿದ್ದರು.

### ನಕಲಿ 'ಗೌಡಾ' ನೋವಿಗೆ ಅಸಲಿ ಮದ್ದು

ಹಿಂದೊಮ್ಮೆ ಮಧ್ಯವರ್ತಿಯೊಬ್ಬರ ಮಾತಿಗೆ ಮರುಳಾಗಿ ಮಹಾದೇವಸ್ವಾಮಿ ಅವರು ಚೆನ್ನೈನ ನಕಲಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದಿದ್ದರು. ಅದು ನಕಲಿ ಎಂದು ಗೊತ್ತಾದ ನಂತರ ಅವರು ನೊಂದುಕೊಂಡಿದ್ದರು. ಆದರೆ ಈಗ ಪ್ರಸಿದ್ಧ ವಿವಿ ಗೌರವ ಡಾಕ್ಟರೇಟ್ ನೀಡುತ್ತಿರುವುದು ಅವರ ಪ್ರತಿಭೆಗೆ ಸಂದ ಗೌರವವಾಗಿದೆ.

## ಹಾಡು ಕಟ್ಟಿಕೊಟ್ಟ ಬದುಕು

ಹಬ್ಬ ಹರಿದಿನ, ಜಾತ್ರೆಗಳಲ್ಲಿ ಮಂಡ್ಯ, ಮೈಸೂರು, ಚಾಮರಾಜನಗರ ಭಾಗದ ಹಳ್ಳಿಗಳಲ್ಲಿ ಮಹಾದೇವಸ್ವಾಮಿ ಭಿಕ್ಷೆ ಬೇಡುತ್ತಿದ್ದರು. ಹಳ್ಳಿಗಳಲ್ಲಿ ಹಾಡುತ್ತಾ ಕುಳಿತರೆ ಆ ಧ್ವನಿ ಮೆಚ್ಚಿ ಸಹಸ್ರ ಜನರು ಬಂದು ಸೇರುತ್ತಿದ್ದರು. ರಾತ್ರಿಯಿಡೀ ನಂಜುಂಡೇಶ್ವರ, ಸಂಕಮ್ಮ, ನೀಲಗಾರರ ಪದಗಳನ್ನು ಹಾಡಿ ಜನರನ್ನು ಮೆಚ್ಚಿಸುತ್ತಿದ್ದರು. ಅಷ್ಟೇ ಅಲ್ಲ, ಜನರು ತಮ್ಮ ಮನೆಗಳಿಗೆ ಕರೆದುಕೊಂಡು ಹೋದಾಗ ಅವರ ಮನೆದೇವರ ಮೇಲೆ ಪದಕಟ್ಟಿ ಹಾಡುತ್ತಿದ್ದರು. ಮೆಚ್ಚಿದ ಜನರು ಖಂಡುಗ ರಾಗಿ, ಜೋಳ ಕೊಟ್ಟು ಕಳುಹಿಸುತ್ತಿದ್ದರು.

ಜನಪದ ಕಲಾವಿದರಾಗಿ ರೂಪುಗೊಂಡ ನಂತರ ಮಳವಳ್ಳಿ ಮಹಾದೇವಸ್ವಾಮಿ ಅವರು ದೇಶದಾದ್ಯಂತ ವಿವಿಧ ಉತ್ಸವಗಳಲ್ಲಿ ಪಾಲ್ಗೊಂಡಿದ್ದಾರೆ. ತಮ್ಮದೇ ತಂಡಕಟ್ಟಿಕೊಂಡು ನಾಡಿನ ಮೂಲೆಮೂಲೆ ಸುತ್ತಿದ್ದಾರೆ. ರಾಜ್ಯದ ಹಲವು ಜಾತ್ರೋತ್ಸವಗಳಲ್ಲಿ ತಮ್ಮ ನಾದಸುಧೆ ಹರಿಸಿದ್ದಾರೆ. ಬಾನುಲಿ ಕೇಂದ್ರಗಳಿಗೆ ಅವರ ಹಾಡುಗಳು ದೊಡ್ಡ ಜನಪದ ಗೀತೆಗಳ ರೆಕಾರ್ಡಿಂಗ್ ಒದಗಿಸಿವೆ. ಇಂದಿಗೂ ಹಲವು ಆಕಾಶವಾಣಿ ಕೇಂದ್ರಗಳು ಮಹಾದೇವಸ್ವಾಮಿ ಅವರ ಪದಗಳನ್ನು ಪ್ರಸಾರ ಮಾಡುತ್ತವೆ. ದೂರದರ್ಶನ, ಚಂದನ ವಾಹಿನಿಯಲ್ಲೂ ಜನಪದ ಗೀತೆಗಳ ಮೂಲಕ ಮೋಡಿ ಮಾಡಿದ್ದಾರೆ. ಆಧುನಿಕ ರಂಗಭೂಮಿಯಲ್ಲೂ ಮೋಡಿ ಮಾಡಿರುವ ಅವರು ಹಲವು ರಂಗಪ್ರಯೋಗಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಅವರು ಹಾಡಿದ ಹಾಡುಗಳನ್ನು ನಾಟಕ, ಸಿನಿಮಾಗಳಲ್ಲಿ ಬಳಸಿಕೊಳ್ಳಲಾಗಿದೆ.

## ಕ್ಯಾಸೆಟ್ ಕ್ರಾಂತಿ

ಕ್ಯಾಸೆಟ್ ಲೋಕದಲ್ಲಿ ಮಳವಳ್ಳಿ ಮಹಾದೇವಸ್ವಾಮಿ ಅವರದು ಬಹು ದೊಡ್ಡ ಸಾಧನೆ. 90ರ ದಶಕದ ಟೇಪ್ ರೆಕಾರ್ಡರ್‌ಗಳ ಕಾಲಘಟ್ಟದಲ್ಲಿ ಅವರ ಹಾಡುಗಳು ಬಹಳ ಪ್ರಸಿದ್ಧಿ ಪಡೆದಿದ್ದವು. ಮಂಡ್ಯ, ಮೈಸೂರು, ಚಾಮರಾಜನಗರ ಭಾಗದ ಮನೆಮನೆಗಳಲ್ಲೂ ಅವರ ಧ್ವನಿ ತುಂಬಿಕೊಂಡ ಮಲೆಮಹದೇಶ್ವರ, ಮಂಟೆಲಿಂಗನ ಹಾಡುಗಳ ಕ್ಯಾಸೆಟ್‌ಗಳಿದ್ದವು. ಅವರ ಧ್ವನಿಯಲ್ಲಿ ಮೂಡಿಬಂದ 150ಕ್ಕೂ ಹೆಚ್ಚು ಕ್ಯಾಸೆಟ್‌ಗಳು ಲಕ್ಷ ಲಕ್ಷ ಸಂಖ್ಯೆಯಲ್ಲಿ ಮಾರಾಟವಾಗಿವೆ. ಆ ಕ್ಯಾಸೆಟ್‌ಗಳಲ್ಲಿ ಜಾತ್ರೆಗಳಲ್ಲಿ ಹಾಟ್ ಕೇಕ್‌ನಂತೆ ಮಾರಾಟವಾಗುತ್ತಿದ್ದವು.

ಮಹಾದೇವಸ್ವಾಮಿ ಅವರು ಕ್ಯಾಸೆಟ್ ಲೋಕಕ್ಕೆ ಬಂದ ಹಿನ್ನೆಲೆಯೇ ರೋಚಕವಾಗಿದೆ. ಖಾಸಗಿ ಆಡಿಯೊ ಕಂಪನಿಯೊಂದು ಕೇವಲ ₹ 30 ಸಾವಿರಕ್ಕೆ ಅವರ ಎಲ್ಲಾ ಜನಪದ ಕತೆ, ಹಾಡುಗಳನ್ನು ರೆಕಾರ್ಡಿಂಗ್ ಮಾಡಲು ಮುಂದಾಗಿತ್ತು. ಆಗ ಹಿರಿಯ ಕಲಾವಿದರೊಬ್ಬರು, 'ಸಾವಿರಾರು ಗೀತೆಗಳನ್ನು ಕೇವಲ ₹ 30 ಸಾವಿರಕ್ಕೆ ಖರೀದಿಸಿ ಕೋಟಿ ಸಂಪಾದನೆ ಮಾಡುತ್ತಾರೆ. ನಿಮ್ಮ ಹಕ್ಕುಗಳನ್ನೂ ಕಿತ್ತು ಕೊಳ್ಳುತ್ತಾರೆ. ಮುಂದೆ